ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಹೆಚ್ಚಿಗೆ ಕೆಲಸ ಮಾಡತಕ್ಕಂತಹ ಮೆಕ್ಯಾನಿಕ್‌ಗಳ ಅವಶ್ಯಕತೆ ಇಲ್ಲ. ಕಾರಣ ಏನೆಂದರೆ ಪ್ರಾದೇಶಿಕ ಕಾರ್ಯಾಗಾರದಲ್ಲಿ ಆಗತಕ್ಕಂಥಾದ್ದನ್ನು ವಿಭಾಗ ಮಟ್ಟಕ್ಕೆ ವರ್ಗಾವಣೆ ಮಾಡಿದ್ದೇವೆ. ಪ್ರಾದೇಶಿಕ ಮಟ್ಟದಲ್ಲಿ ಬರೀ ಬಾಡಿ ಬಿಲ್ಡಿಂಗ್ ಕೆಲಸವನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಇದನ್ನು ಬಿಟ್ಟು ಅಲ್ಲಿ ಬೇರೆ ಯಾವ ಕೆಲಸವನ್ನು ತೆಗೆದುಕೊಳ್ಳುತ್ತಾ ಇಲ್ಲ. ಅಂತೆಯೇ ಮೂರನೆಯ ಪ್ರಾದೇಶಿಕ ಕಾರ್ಯಾಗಾರವನ್ನು ಪ್ರಾದೇಶಿಕ ಮಟ್ಟದಲ್ಲಿ ಮಾಡತಕ್ಕಂತಹ ಅವಶ್ಯಕತೆಯೂ ಸಧ್ಯಕ್ಕೆ ಇಲ್ಲ.

ಶ್ರೀ ಬಿ. ವಿ. ಕರೀಗೌಡ.—ಭೂಮಾಲೀಕರುಗಳಿಗೆ ಹಣವನ್ನು ಯಾವಾಗ ಕೊಡುತ್ತೀರಿ ?

ಶ್ರೀ ವೀರಣ್ಣ.—ಹಣವನ್ನು ಕೊಡುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ತಿಳಿಸಿದ್ದೇನೆ. ಆದಷ್ಟು ಜಾಗ್ರತೆ ಮಾನ್ಯ ಗೌಡರವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೊಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಚೆಗೆ ೨ ಪಂಕ್ಚಿಯ ನಿರ್ವಹಣೆಯ ಪದ್ಧತಿಯನ್ನು ಅನುಷ್ಠಾನಕ್ಕೆ ತಂದಿದೆ ಎಂದು ಹೇಳಿದ್ದಾರೆ. ಮುತ್ತು ರ್‍ಐಳಳನೇ ಇಸವಿಯಲ್ಲಿ ಈ ತ್ರೀ ಟೈರ್ ಸಿಸ್ಟಂಗೆ ಅಡಿಗಲ್ಲು ಹಾಕಿದಾಗ ಈ ಟೂ ಟೈರ್ ಸಿಸ್ಟಂ ಪದ್ಧತಿಯನ್ನು ಅನುಷ್ಠಾನಕ್ಕೆ ತರುತ್ತೇವೆನ್ನುವುದು ಪರಿಶೀಲನೆಯಲ್ಲಿರಲಿಲ್ಲವೇ ? ಒಂದು ವೇಳೆ ಇದು ಪರಿಶೀಲನೆಯಲ್ಲಿ ಇದ್ದಿದ್ದರೆ ಇದಕ್ಕೆ ಅಡಿಗಲ್ಲು ಹಾಕುವ ಅವಶ್ಯಕತೆ ಏನು ಇತ್ತು ?

ಶ್ರೀ ವೀರಣ್ಣ.—ರ್‍ಐಳಳನೇ ಇಸವಿಯಲ್ಲಿಯೇ ಇದಕ್ಕೆ ಅಡಿಗಲ್ಲನ್ನು ಹಾಕಿ ಬಂದಿದ್ದಾರೆ. ಆದರೆ ಇದರ ಉದ್ದೇಶ ಏನು ಎನ್ನುವುದರ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದಾದರೂ ಒಂದು ಬಸ್ ಕೆಟ್ಟುಹೋಯಿತು ಎಂದರೆ, ಒಂದು ವೇಳೆ ನಿಮ್ಮ ಕ್ಷೇತ್ರಕ್ಕೆ ಹೋಗುತ್ತಿದ್ದ ಬಸ್ಸೇ ಕೆಟ್ಟು ಹೋಗಿದ್ದರೆ ಅದು ಬೆಂಗಳೂರಿಗೆ ಬರಬೇಕಾಗಿತ್ತು. ಅಲ್ಲದೆ ಅದಕ್ಕೆ ಡೀಸಲ್ ಕೂಡ ಹೆಚ್ಚು ಖರ್ಚಾಗುತ್ತಿತ್ತು, ಖರ್ಚು ಕೂಡ ಜಾಸ್ತಿಯಾಗುತ್ತಿತ್ತು ಮತ್ತು ಸಮಯವೂ ಜಾಸ್ತಿ ಆಗಂತ್ತಿತ್ತು. ಈ ಖರ್ಚನ್ನು ಕಡಿಮೆ ಮಾಡುವ ದೃಷ್ಟಿಯಿಂದ ರ್‍ಐಳಳನೇ ಮಾರ್ಚಿಯಲ್ಲಿ ಈ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ನಿರ್ಧಾರ ತೆಗೆದುಕೊಂಡದ್ದುದಂ.

ಜನಾರೋಗ್ಯದ ಮೇಲಿನ ವೆಚ್ಚ

೩೪೪. ಶ್ರೀ ಮಹಮ್ಮದ್ ಲೈಖುದ್ದೀನ್ (ಬೀದರ್) ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜನಾರೋಗ್ಯ ಕಾರ್ಯಕ್ರಮಕ್ಕೆ ರ್‍ಐಳಖನೇ ಸಾಲಿನಲ್ಲಿ ಖರ್ಚು ಮಾಡಿರುವ ಒಟ್ಟು ಹಣ ವೆಷ್ಟು ?

ಆ) ಜನಾರೋಗ್ಯ ಕಾರ್ಯಕ್ರಮಕ್ಕೆ ಮಾಡಿರುವ ಖರ್ಚು, ಸರ್ಕಾರಿ ವಾಹನಗಳ ರಿಪೇರಿಗಾಗಿ ಮಾಡಿರುವ ಖರ್ಚಿಗಿಂತ ಕಡಿಮೆ ಇದೆಯೆ? ಇದು ಸರಿಯೇ?

ಇ) ಸರ್ಕಾರದಿಂದ ಜನಾರೋಗ್ಯ ಕಾರ್ಯಕ್ರಮಕ್ಕೆ ಹೆಚ್ಚಿಗೆ ಹಣವನ್ನು ಮಂಜೂರು ಮಾಡಲು ಹಾಗೂ ವಾಹನವನ್ನು ಕಡಿಮೆ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಂಡಿದೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು),—

ಅ) ೧೭೪೯.೪೬ ಲಕ್ಷ ರೂಪಾಯಿಗಳು

ಆ) ಇಲ್ಲ

ಇ) ಮೇಲಿನ (ಆ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

SRI MOHAMMED LAIKUDDIN.—The expenditure on public Health during 1985 was shown as Rs. 1739-46 lakhs & the expenditure on medicines was shown as Rs. 1471 lakhs. The population of Karnataka is 38.92 millions or roughly 4 crores. That means, the Karnataka Government is spending only less than Rs. 5/- per year per

head and moreover, all the District Hospitals, PUC, PHCs, PHU are starving without medicines.

As per the Government of Karnataka brochur, the expenditure on maintenance has been shown as Rs. 6380 lakhs during 1985-86 and the expenditure on Officers was shown as Rs. 3180 lakhs. What is the ratio between maintenance and the medical care on Public Health It is because of less budget provided for medicines & Public Health, people are suffering. Will the Hon'ble Minister explain the reasons for spending Crores of rupees on Officers by neglecting Public Health?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ವಾಹನಗಳ ಮೇಲೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಬೇರೆ ಬೇರೆ ಬಾಬುಗಳ ಮೇಲೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ವಾಹನಗಳ ಮೇಲೆ ಬಹಳ ಕಡಿಮೆ ಹಣ ಖರ್ಚು ಮಾಡಿದ್ದೇವೆ. ವಾಹನಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಮೆಂಟೇನೆನ್ಸ್‌ಗೆ ೩೧.೫೦ ಲಕ್ಷ ಖರ್ಚು ಮಾಡಿದ್ದೇವೆ. ಸಿಬ್ಬಂದಿಗೆ ಮತ್ತು ಮೆಕ್ಯಾನಿಕ್ ಈ ಬಾಬುಗಳಿಗೆ ಖರ್ಚು ಮಾಡಿರತಕ್ಕಂಥಾದ್ದು ಬಹಳ ಕಡಿಮೆ, ಅದನ್ನೂ ಸಹ ತೋರಿಸಿದ್ದೇನೆ. ಇನ್ನು ಔಷಧಿ ಬಗ್ಗೆ ಹೇಳುವುದಾದರೆ ೩ ವರ್ಷದಿಂದ, ಈಚೆಗೆ ಈ ಔಷಧಿಗಳಿಗೆ ಏನು ಕೊಡುತ್ತಿದ್ದರೋ ಅದರ ಎರಡು ಮೂರು ಪಟ್ಟು ಈಗ ನಾವು ಜಾಸ್ತಿ ಕೊಡುತ್ತಾ ಇದ್ದೇವೆ. ಇದಂತೆ ರೆಗೆ ಯಾವ ಆಸ್ಪತ್ರೆಗಳಲ್ಲೂ ಕೂಡ ಕಡಿಮೆ ಔಷಧಿ ಬಂದಿದೆ ಎನ್ನುವ ದೂರು ಬಂದಿಲ್ಲ.

SRI MOHAMMED LAIKUDDIN.—The Hon'ble Minister has stated that on vehicles only Rs. 529 lakhs has been spent. It may be for the purchase of vehicles. Regarding maintenaces, lot of amount has been spent. So, more expenditure was incurred on the repairs of vehicles than for treating human life. The expenditure on maintenance of vehicles or the purchase of vehicles may kindly be reduced and also the expenditure on Officers should be reduced. I also request that on the medical care, more money should be spent and the budget provision should be enhanced. I want a reply from the Hon'ble Minister in this regard.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈಗ ವಾಹನಗಳು ಇಲ್ಲದೇ ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯಗಳನು ಕೊಡುವುದು ಕಷ್ಟ. ತಮಗೆ ಗೊತ್ತಿರುವ ಹಾಗೆ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ಕಾರ್ಯ ಚಟುವಟಿಕೆಗಳೂ ನಡೆಯಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೆ ವಾಹನಗಳ ಸೌಕರ್ಯ ಬೇಕಾಗುತ್ತದೆ. ಆದುದರಿಂದ ಅಲ್ಲಿಗೆ ಎಷ್ಟು ವಾಹನಗಳು ಅಗತ್ಯವೋ ಅಷ್ಟು ಮಾತ್ರ ಕೊಂಡುಕೊಂಡಿದ್ದೇವೆ. ಕಡಿಮೆ ಖರ್ಚಿನಲ್ಲಿ ಆ ಬಾಬುಗಳಿಗೆ ಹಣವನ್ನು ಒದಗಿಸುತ್ತಿದೇವೇ ವಿನಾ ಬಹಳ ದುಬಾರಿಯಾಗಿ ಖರ್ಚು ಮಾಡುತ್ತಾ ಇಲ್ಲ.

ಕೇಂದ್ರ ಕಾನೂನು ಸಚಿವರು ಮಾಡಿರುವ ಆಪಾದನೆಗಳು

ಳಿಟ್ಟೂ. ಶ್ರೀ ಜಿ.ಎಸ್. ಹೆಗಡೆ ಅಜ್ಜಿಬಾಳ್ (ಅಂಕೋಲಾ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ಸ್ಥಾನಕ್ಕೆ ರಾಜ್ಯ ಸರ್ಕಾರವು ಸಚಿವರುಗಳಿಗೆ ಸಂಬಂಧಪಟ್ಟವರುಗಳನ್ನು ನೇಮಿಸಲು ಶಿಫಾರಸ್ಸು ಮಾಡಿದೆಯೆಂದು ಕೇಂದ್ರ ಸಹಾಯಕ ಕಾನೂನು ಸಚಿವರಾದ ಶ್ರೀ ಭಾರದ್ವಾಜ್‌ರವರು ಮಾಡಿರುವ ಆಪಾದನೆಯು ನಿಜವೇ?